

ಸಾಹಿತ್ಯವನ್ನು ಸವಿಯಾಗಿ ಉಣಬಡಿಸುವ ಮಾಸಪತ್ರಿಕೆ 'ಮಯೂರ'ದ ಮೇ ಸಂಚಿಕೆಯ ಎಲ್ಲ ಕತೆಗಳು ಉತ್ತಮವಾಗಿವೆ. ಮ.ಸೊ. ಹಾಲಸ್ವಾಮಿಯವರ ಕತೆ 'ನಿರ್ಧಾರ' ಕರುಳು ಮಿಡಿಯುವಂತಿತ್ತು.

**ರಾಜು ಹಗ್ಗದ, ಇಣಚಗಲ್**

ಮೇ ಸಂಚಿಕೆ ಆಪ್ತವಾಗಿತ್ತು. ಕತೆಗಳು ಮನಸ್ಸಿಗೆ ಮುದ ನೀಡಿದವು. ಕೆ.ಎನ್. ಗಣೇಶಯ್ಯ ಅವರ ನೀಳ್ಗತೆ 'ಆರ್ಯವೀರ್ಯ' ಕುತೂಹಲಕಾರಿಯಾಗಿದೆ.

**ಪಿ.ಎ. ರೊಟ್ಟಿ, ಬಸಾಪೂರ**

ಆಸಕ್ತಿಯಿಂದ ಓದಿಸಿಕೊಂಡ 'ಆರ್ಯವೀರ್ಯ' ಚರಿತ್ರೆಯ ಕರಾಳ ಅಧ್ಯಾಯವನ್ನು ಅರ್ಥವತ್ತಾಗಿ ಕಟ್ಟಿಕೊಟ್ಟಿದೆ.

**ಎಚ್.ಎಸ್. ಸತ್ಯನಾರಾಯಣರಾವ್, ಅರಕಲವಾಡಿ**

ಪ್ರೊ. ರಾಮ ದಲಾಲ ಅವರ ಹಿಂದೀ ಕತೆ 'ಕಲ್ಪವೃಕ್ಷ' (ಕನ್ನಡಕ್ಕೆ: ಎಂ.ಸಿ. ಅಂಟಿನ) ಮನಸ್ಸನ್ನು ಕಲಕಿತು. ಸಾಥಿಯಾನ ವ್ಯಕ್ತಿತ್ವ ತುಂಬಾ ಮೆಚ್ಚುಗೆಯಾಯಿತು.

**ರಾಯಲಪಾಡು ರಾಘವೇಂದ್ರ, ಕೋಲಾರ**

ಈ ಸಂಚಿಕೆಯ ಕತೆಗಳು ಒಂದಕ್ಕಿಂತ ಒಂದು ಸೊಗಸಾಗಿವೆ. ವಿಭಿನ್ನ ಕಥಾವಸ್ತುಗಳಿರುವ 'ದೂರ–ವಾಣಿ' (ಕೃಷ್ಣಮೂರ್ತಿ ಹನೂರ), 'ನಿರ್ಧಾರ' (ಮ.ಸೊ. ಹಾಲಸ್ವಾಮಿ), 'ಮಳೆಯ ಧ್ಯಾನ' (ಎಚ್.ಆರ್. ಸುಜಾತಾ) ಕತೆಗಳು ಗಮನ ಸೆಳೆದವು.

**ಎನ್. ಮಹದೇವ, ಚೆನ್ನೈ**

'ವಾಸ್ತವ' (ಪಿ.ಪಿ. ಉಪಾಧ್ಯ) ಕತೆಯ ಆರಂಭ ರೋಚಕವಾದರೂ ಕತೆ ಮುಂದುವರೆದಂತೆ ನಾಟಕೀಯ ಎನಿಸುತ್ತದೆ. ಅಂತ್ಯದಲ್ಲಿಯೂ ಸಹ ವಾಸ್ತವದ ಅನುಭವ ಉಂಟಾಗುವುದಿಲ್ಲ.

**ಬಸವರಾಜ ಬೂದಿಹಾಳ, ಗೋವಾ**

ಪ್ರೀತಿಗೆ ವಯಸ್ಸಿನ ಹಂಗಿಲ್ಲ ಎನ್ನುವುದನ್ನು ಸಾರುವ 'ವಾಸ್ತವ' ಹಾಗೂ ಬಾಂಧವ್ಯದ ಕೊಂಡಿಗಳು ಕಳಚುತ್ತಿರುವುದನ್ನು ಮಾರ್ಮಿಕವಾಗಿ ಚಿತ್ರಿಸುವ ಎನ್.ಪಿ. ಮಂಜುನಾಥ್ ಅವರ 'ಶೋಧನೆ' ಕತೆಗಳು ಮೆಚ್ಚುಗೆಯಾದವು.

**ಸುಂದರ್, ಬೆಂಗಳೂರು**

ಈ ಸಂಚಿಕೆಯ ಕವಿತೆಗಳು ಸೊಗಸಾಗಿವೆ. ಮುಂದಿನ ಸಂಚಿಕೆಯಲ್ಲಿ ಇನ್ನಷ್ಟು ಹೆಚ್ಚಿನ ಸಂಖ್ಯೆಯ, ಮತ್ತಷ್ಟು ಸೊಗಸಾದ ಕವಿತೆಗಳ ನಿರೀಕ್ಷೆ ಹುಟ್ಟಿಸಿದೆ.

**ಅನುಪಮಾ, ಮಾಲೂರು**

ಪ್ರತಿ ತಿಂಗಳೂ ಚೆಣ್ಣರ ಚಾವಡಿಯನ್ನು ಕಾದು ಓದುತ್ತೇನೆ. ವೈವಿಧ್ಯಪೂರ್ಣ ಕತೆಗಳು ಬರುತ್ತಿವೆ. ಈ ಬಾರಿ ಎರಡು ಮುದ್ದಾದ ಕವಿತೆಗಳನ್ನೂ ಓದಿ ಮನ ತಣಿಯಿತು.

**ಭಾಗ್ಯ ಬಿರಾದಾರ, ಬೆಂಗಳೂರು**